ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

ಸಿ.ಸಿ. ಸಂಖ್ಯೆ: **507/2025**

ಪಿರ್ಯಾದಿ : ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್ ಠಾಣೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿ : ಸುರೇಶಗೌಡ ಯಾನೆ ಸುರೇಶ ಎಸ್.ಬಿ.,
ವಯಸ್ಸು ಸುಮಾರು 43 ವರ್ಷ,
ಬಿನ್ ದಿ: ಭದ್ರೇಗೌಡ,
ಶ್ರೀದೇವಿ ಬಾರ್ ಅಂಡ್ ರೆಸ್ಟೋರೆಂಟ್ ನಲ್ಲಿ ಕ್ಯಾಷಿಯರ್,
ವಾಸ: ಸಂಗಮಾಪುರ ಗ್ರಾಮ, ಕಸಬಾ ಹೋಬಳಿ,
ಮೂಡಿಗೆರೆ ತಾಲ್ಲೂಕು.

ದೋಷಾರೋಪಣೆ

ಶ್ರೀ. ವಿಶ್ವನಾಥ್ ಎ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮಗಳ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆ:-

ದಿನಾಂಕ: 16.10.2024 ರಂದು ಸಂಜೆ 6.30 ರ ಸಮಯದಲ್ಲಿ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಕೋಳಗೋಡು ಗ್ರಾಮದ ಶ್ರೀದೇವಿ ಬಾರ್ ಅಂಡ್ ರೆಸ್ಟೋರೆಂಟ್ ಒಳಗೆ ಚಾಸಾ-1 ರತ್ನಮ್ಮ ರವರ ಮಗ ಚಾಸಾ-6 ಪೃಥ್ವಿರಾಜ್ ರವರು ಮಧ್ಯಪಾನ ಮಾಡಲು ಹೋಗಿದ್ದಾಗ ಆರೋಪಿಯಾದ ನೀವು ಎಣ್ಣೆ ಬಾಕ್ಸ್ ಗಳನ್ನು ಅಂಗಡಿಗಳಿಗೆ ಸಪ್ಲೈ ಮಾಡಲು ತೆಗೆದುಕೊಂಡು ಹೋಗುವಂತೆ ಚಾಸಾ-6 ರವರಿಗೆ ತಿಳಿಸಿದಾಗ, ಚಾಸಾ-6 ರವರು ಹೋಗಲು ನಿರಾಕರಿಸಿದಕ್ಕೆ ಆರೋಪಿಯಾದ ನೀವು ಚಾಸಾ-6 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **352** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಕೋಳಗೋಡು ಬಾರ್ ಅಂಡ್ ರೆಸ್ಟೋರೆಂಟ್ ನಲ್ಲಿ ಇದ್ದ GALA ಕಂಪನಿಯ ಕಸದ ಪೊರಕೆ ಹಿಡಿಯಿಂದ ಚಾಸಾ-6 ರವರ ಮುಖದ ಎಡಕಣ್ಣಿನ ಹತ್ತಿರ ಬಲವಾಗಿ ಗುದ್ದಿ ತೀವ್ರ ಸ್ವರೂಪದ ಸ್ವರೂಪದ ಗಾಯವನುಂಟು ಮಾಡಿದ್ದು, ನಂತರ ಚಾಸಾ-6 ರವರಿಗೆ ಚಿಕಿತ್ಸೆ ಕೊಡಿಸಿ ಮನೆಗೆ ಬಿಟ್ಟು ಮುಂದುವರೆದು ಚಿಕಿತ್ಸೆ ಕೊಡಿಸದೇ ಇದ್ದ ಕಾರಣ ಚಾಸಾ-6 ರವರಿಗೆ ಎಡ ಕಣ್ಣಿಗೆ ಆದ ಗಾಯದ ತೀವ್ರತೆ ಬಲಕಣ್ಣಿಗೂ ತಾಗಿ

ತೀರ್ವ ಸ್ವರೂಪದ ಗಾಯವನ್ನು ಉಂಟುಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **118(2)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

***3.*** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ದಿನಾಂಕಃ 17.10.2024 ರಂದು ಚಾಸಾ-6 ರವರನ್ನು ಮೂಡಿಗೆರೆ ಎಂಜಿಎಂ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಾಸಾ-6 ರವರಿಗೆ ಕಡ್ಡಿತಾಗಿ ಗಾಯವಾಗಿರುತ್ತದೆ ಎಂದು ಮೂಡಿಗೆರೆ ವೈಧ್ಯಾದಿಕಾರಿಗಳ ಬಳಿ ಸತ್ಯವನ್ನು ಮರೆಮಾಚಿ ಸುಳ್ಳು ಹೇಳಿ ಚಿಕಿತ್ಸೆಕೊಡಿಸಿ, ವೈದ್ಯರ ಬಳಿ ಸತ್ಯವನ್ನು ಮರೆಮಾಚುವ ಮೂಲಕ ಸಾಕ್ಷ್ಯ ನಾಶಪಡಿಸಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **238** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ**,** ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ**.**

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ***?*** ಅವುಗಳು ನಿಮಗೆ ಅರ್ಥವಾಯಿತೇ***?***

ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ***?***

ಆರೋಪಿಯ ಉತ್ತರಃ

***(***ಆರೋಪಿಗೆ ದಿನಾಂಕ 14.11.2025 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ**,** ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು**.** ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ***)***

ಸಹಿ**/-**

ಮೂಡಿಗೆರೆ
ದಿನಾಂಕಃ 14.11.2025

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ**.**ಎಂ**.**ಎಫ್**.**ಸಿ, ಮೂಡಿಗೆರೆ**.**